INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -04,July-August, 2026
Page No,71-76
Peer -Reviewed, Refereed Journal

# ‘ತಬ್ಬಲಿಯು ನೀನಾದೆ ಮಗನೆ’ ಕಾದಂಬರಿ ಪ್ರಸ್ತುತಪಡಿಸುವ ಮಾನವೀಯ ಮೌಲ್ಯಗಳು

**ಡಾ. ಪ್ರೇಮ. ಎಸ್.**[1]

ಎಸ್.ಎಲ್.ಭೈರಪ್ಪ ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿಕಾರರು ಮತ್ತು ಲೇಖಕರು. ಕನ್ನಡ ಸಾಹಿತ್ಯದಲ್ಲಿ ಬರೆದಿರುವ ಇವರ ಕೃತಿಗಳು ಇಂಗ್ಲೀಷ್ ಹಾಗೂ ಭಾರತೀಯ ಭಾಷೆಗಳಿಗೆ ಅನುವಾದಗೊಂಡು ಭಾರತದ ಸಾಹಿತ್ಯವಲಯದಲ್ಲಿ ಹೆಸರಾಗಿದ್ದಾರೆ. ಇವರ ಕಾದಂಬರಿಗಳು ಹಲವಾರು ಮರುಮುದ್ರಣಗಳನ್ನು ಕಂಡು ಕನ್ನಡದ ಜನಪ್ರಿಯ ಬರಹಗಾರರಾಗಿದ್ದಾರೆ. ಇವರು ಭೀಮಕಾಯ, ಬೆಳಕು ಮೂಡಿತು, ಧರ್ಮಶ್ರೀ, ದೂರ ಸರಿದರು, ಮತದಾನ, ವಂಶವೃಕ್ಷ, ಜಲಪಾತ, ನಾಯಿ ನೆರಳು, ತಬ್ಬಲಿಯು ನೀನಾದೆ ಮಗನೆ, ಗೃಹಭಂಗ, ನಿರಾಕರಣ, ಗ್ರಹಣ, ದಾಟು, ಅನ್ವೇಷಣ, ಪರ್ವ, ನೆಲೆ, ಸಾಕ್ಷಿ, ಅಂಚು, ತಂತು, ಸಾರ್ಥ, ಮಂದ್ರ, ಆವರಣ, ಕವಲು, ಯಾನ ಮತ್ತು ಉತ್ತರಕಾಂಡ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ನಾಡೋಜ ಪ್ರಶಸ್ತಿ – 2011, ಸರಸ್ವತಿ ಸಮ್ಮಾನ್ ಪ್ರಶಸ್ತಿ (ಮಂದ್ರ ಕಾದಂಬರಿಗೆ) – 2010, ಪಂಪ ಪ್ರಶಸ್ತಿ – 2005, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ದಾಟು ಕಾದಂಬರಿಗೆ)– 1975 ಮತ್ತು ಭಾರತ ಸರ್ಕಾರವು 2023ನೇ ಸಾಲಿನಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

ಸಾಹಿತ್ಯ ಕೃತಿಗಳು ಅನಾದಿಕಾಲದಿಂದಲೂ ಮಾನವೀಯ ಸಂಬಂಧದ ನೆಲೆಗಳನ್ನು ಹುಡುಕುತ್ತಿವೆ. ಈ ನೆಲೆ ಬೆಲೆಗಳ ಹುಡುಕಾಟದಲ್ಲಿ ಸದಾ ಮಗ್ನವಾಗಿದೆ. ಮಾನವೀಯ ಮೌಲ್ಯಗಳು ಎಂದರೆ ಮನುಷ್ಯನ ನಡವಳಿಕೆಯನ್ನು ಮಾರ್ಗದರ್ಶಿಸುವ ಮತ್ತು ಸಮಾಜದಲ್ಲಿ ಶಾಂತಿ, ಸಾಮರಸ್ಯವನ್ನು ಕಾಪಾಡುವ ಮೂಲಭೂತ ತತ್ವಗಳು. ಇವು ವ್ಯಕ್ತಿಯನ್ನು ಉತ್ತಮ ವ್ಯಕ್ತಿತ್ವದತ್ತ ಕೊಂಡೊಯ್ಯುತ್ತವೆ. ಸಹಾನುಭೂತಿ ಮತ್ತು ಕರುಣೆ ಇತರರ ಕಷ್ಟಗಳಿಗೆ ಸ್ಪಂದಿಸುವುದು ಮತ್ತು ಅವರ ನೋವನ್ನು ಅರ್ಥಮಾಡಿಕೊಳ್ಳುವುದು. ಪ್ರಾಮಾಣಿಕತೆ ಜೀವನದ ಪ್ರತಿಯೊಂದು ಹಂತದಲ್ಲೂ ಸತ್ಯ ಮತ್ತು ನೈತಿಕತೆಯನ್ನು ಕಾಪಾಡಿಕೊಳ್ಳುವುದು. ಪರಸ್ಪರ ಗೌರವ ಇತರರ ಭಾವನೆಗಳು, ಅಭಿಪ್ರಾಯಗಳು ಮತ್ತು ವೈವಿಧ್ಯತೆಯನ್ನು ಕಾಪಾಡಿಕೊಳ್ಳುವುದು.

[1].**ಕನ್ನಡ ಸಹಾಯಕ ಪ್ರಾಧ್ಯಾಪಕರು,ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜು, ಮೈಸೂರು**

ಸಹಿಷ್ಣುತೆ ಭಿನ್ನಾಭಿಪ್ರಾಯಗಳನ್ನು ಸಹಿಸಿಕೊಳ್ಳುವುದು ಮತ್ತು ಸಮಾಜದಲ್ಲಿ ಹೊಂದಾಣಿಕೆಯಿಂದ ಇರುವುದು. ಸಹಕಾರ ಮತ್ತು ಕ್ಷಮಾಗುಣ ಇತರರಿಗೆ ಸಹಾಯ ಮಾಡುವ ಮನೋಭಾವ ಮತ್ತು ತಪ್ಪುಗಳನ್ನು ಕ್ಷಮಿಸುವ ದೊಡ್ಡತನ. ಮಾನವೀಯ ಮೌಲ್ಯಗಳು ಮನುಷ್ಯನನ್ನು ಪ್ರಾಣಿಗಳಿಂದ ಪ್ರತ್ಯೇಕಿಸುತ್ತವೆ ಮತ್ತು ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಇವು ಅತ್ಯಗತ್ಯ.

ಎಸ್ ಎಲ್ ಭೈರಪ್ಪನವರು ಹಿಂದಿನ ಕಥನಗಳ ನೇಯ್ಗೆಯನ್ನು ಬಳಸಿಕೊಂಡು ತಮ್ಮ ಸಾಹಿತ್ಯದಲ್ಲಿ ಮಾನವೀಯ ಸಂಬಂಧಗಳನ್ನು ಅನ್ವೇಷಿಸುತ್ತಿದ್ದಾರೆ. ಈ ಸಂಬಂಧಗಳ ನಡುವೆ ಇರುವ ಅನ್ಯೂನ್ಯತೆಯನ್ನು ವಿವರಿಸುವುದೇ 'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯಾಗಿದೆ. ಈ ಕಾದಂಬರಿಯಲ್ಲಿ ಎರಡು ಸಂಸ್ಕೃತಿಗಳ ಘರ್ಷಣೆ ಅಥವಾ ಒಳಮುಖ ದರ್ಶನ ಕಂಡುಬರುತ್ತದೆ. 'ನಮಗೆ ಟ್ರ್ಯಾಕ್ಟರೂ ಬೇಕು ಗೋಪೂಜೆಯೂ ಬೇಕು' ಎಂಬ ಕಾದಂಬರಿಯ ಮಾತು ಎರಡು ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತದೆ. ಎಲ್ಲರಿಗೂ ಸುಖ ಕೋರುವ ಭಾರತೀಯ ಸಂಸ್ಕೃತಿ ಆರ್ಥಿಕ ದೃಷ್ಟಿಯ ಹಿನ್ನೆಲೆ, ಯಾಂತ್ರಿಕ ನಾಗರೀಕತೆ, ಪಾಶ್ಚತ್ಯ ಸಂಸ್ಕೃತಿಗಳ ಭಿನ್ನದೃಷ್ಟಿ ಇಲ್ಲಿ ಎದ್ದು ಕಾಣುತ್ತದೆ.

ಈ ಕಾದಂಬರಿಯಲ್ಲಿ ಮುಖ್ಯವಾಗಿ ಕಂಡು ಬರುವ ಕಾಳಿಂಗ ಗೌಡರು ಹಸುವನ್ನು ತನ್ನ ಮಕ್ಕಳಂತೆ ಸಾಕಿ ಸಲಹುತ್ತಾನೆ. ಗೋವು ಭಾರತೀಯರಿಗೆ ಪುಣ್ಯ ಸಂಪತ್ತು. ಪಾಶ್ಚಾತ್ಯರಿಗೆ ವಾಣಿಜ್ಯ ಸಂಪತ್ತು, ಪುಣ್ಯಕೋಟಿ ಇಲ್ಲಿ ಬರುವ ಹಸು, ಹಿಂಸೆಯ ಮೇಲೆ ಅಹಿಂಸೆಯ ವಿಜಯ ಸಾಧಿಸುವ ಜಾನಪದ ಕಥನ ಕವನ ಗೋವಿನ ಹಾಡು ಅರ್ಥಪೂರ್ಣ ಪ್ರತೀಕವಾಗಿ ಪಲ್ಲವಿಯಂತೆ ಕಾದಂಬರಿಯಲ್ಲಿ ಬಂದಿದೆ. ಭೈರಪ್ಪನವರೆ ಹೇಳುವಂತೆ ಪಾವಿತ್ರ್ಯಗಳ ನಂಬಿಕೆ ಮತ್ತು ಜೀವನ ಮೌಲ್ಯಗಳ ಬಗೆಗೆ ನನಗೆ ಕಾಳಜಿ ಇರುವುದರಿಂದ ಹಾಲು ಕೊಡುವ ಹಸುವಿಗೂ ನಮಗೂ ಇರುವ ಭಾವನಾತ್ಮಕ ಸಂಬಂಧ(ತಾಯಿ ಮಗುವಿನಂತೆ) ನೋಡಬೇಕು. ಮಾನವನ ಪ್ರೀತಿ ಮಾನವ ಪ್ರಾಣಿಗಳಿಗೆ ಮೀಸಲಾಗಿರಬೇಕಾಗಿಲ್ಲ ಇತರ ಪ್ರಾಣಿಗಳಿಗೂ ದೊರಕುವುದು ನಿಜವಾದ ಮಾನವೀಯತೆ. ಈ ತಾತ್ವಿಕ ನೆಲೆಗಟ್ಟಿನಲ್ಲಿ ಈ ಕಾದಂಬರಿ ರಚಿತವಾಗಿರುವುದನ್ನು ನೋಡಬಹುದು.

ಈ ಕಾದಂಬರಿಯಲ್ಲಿ ಗೋವುಗಳಿಗೆ ಕೃತಕವಾಗಿ ಗರ್ಭಧಾರಣೆ ಮಾಡಿಸುವ ತಾಯಿತನದ ಸಹಜ ಮಾರ್ದವ, ಮಾಧುರ್ಯ, ಸುಖವನ್ನು ಕಿತ್ತುಕೊಂಡಿರುವ ಸಂಗತಿಯನ್ನು ಕೇಳಿ ಹಸುಗಳಿಗೆ ಯಂತ್ರವನ್ನು ಅಳವಡಿಸಿ ಹಾಲು ಕರೆಯುವ ದೃಶ್ಯವನ್ನು ಕಂಡು ಮರುಗಿದಾಗ ಹುಟ್ಟುವ ಕೃತಿಯೇ 'ತಬ್ಬಲಿಯೂ ನೀನಾದೆ ಮಗನೆ'. ಒಂದರ್ಥದಲ್ಲಿ ಈ ಕೃತಿಯು ಸನಾತನ ಸಂಸ್ಕೃತಿಯ ಒಂದು ಮುಖ್ಯ ಮೌಲ್ಯವನ್ನು ಹಿಡಿದು ತನ್ಮೂಲಕ ಹಿರಿಯ ಸಂಸ್ಕೃತಿಗೆ ರಚಿಸಿದ ವ್ಯಾಖ್ಯೆವೆಂದರೆ ತಪ್ಪಾಗುವುದಿಲ್ಲ. ಭಾರತೀಯರಲ್ಲಿ ಗೋವಿನೆಡೆಗೆ ಇಂದಿಗೂ ಇರುವ ಪೂಜ್ಯ ಭಾವನೆ ಅದರ ಪಾವಿತ್ರದ ಬಗೆಗೆ ಇರುವ ಆಳವಾದ ಭಕ್ತಿ

ಭಾರತೀಯರ ಆತ್ಮದಲ್ಲಿಯೇ ಇದೆ ಎಂಬುದು ಎಷ್ಟು ಸುವಿದಿತವೋ ಅದು ಆಕಸ್ಮಿಕವಂತೂ ಅಲ್ಲವೇ ಅಲ್ಲ ಎಂಬುದು ಅಷ್ಟೇ ಸತ್ಯ.

ಗೋವಿಗೆ ಹೋಲಿಸಿದರೆ ನಮ್ಮಲ್ಲಿ ವೃಷಭಕ್ಕೂ ಎರಡನೆಯ ಸ್ಥಾನ. ಈ ಪ್ರಶ್ನೆಗೆ ಉತ್ತರವನ್ನು ಡಿ.ವಿ.ಜಿ. ಅವರ ಸಾಹಿತ್ಯ ಶಕ್ತಿಯಲ್ಲಿ ಪರೋಕ್ಷವಾಗಿ ಕಾಣಬಹುದು. ಒಳ ನಂಬಿಕೆಯ ಪ್ರಭಾವ ಹೊರ ಸಂದರ್ಭಕ್ಕಿಂತ ಹೆಚ್ಚಿನದು. ಒಬ್ಬ ವ್ಯಕ್ತಿಯ ಇಂತಹ ಒಳನಂಬಿಕೆಯನ್ನು ಸಮಾಜದ ಮಟ್ಟಕ್ಕೆ ರಾಷ್ಟ್ರಮಟ್ಟಕ್ಕೆ ವಿಸ್ತರಿಸಿದರೆ ಅದು ಸಾಂಸ್ಕೃತಿಕ ರಾಷ್ಟ್ರೀಯ ಮೌಲ್ಯವಾಗುತ್ತದೆ. ಈ ಅರ್ಥದಲ್ಲಿ ಗೋವು ಭಾರತೀಯರಿಗೆ ಒಂದು ಮೌಲ್ಯ.

ಈ ಎಲ್ಲಾ ಮೌಲ್ಯಗಳ ನಂಬಿಕೆಗಳ ಧರ್ಮಾರ್ಥ ಕಾಮೋಕ್ಷ ಜಿಜ್ಞಾಸೆಗಳ ಪುರಾಣ ಇತಿಹಾಸ ಸಾಹಿತ್ಯಗಳ ವೃದ್ಯವಾದ ಮೂರ್ತ ರೂಪವೇ ತಬ್ಬಲಿಯಲ್ಲಿ ಬರುವ ಕಾಳಿಂಗ ಗೊಲ್ಲಗೌಡ ಅಥವಾ ಕಾಳಿಂಗಜ್ಜ. ಆಧುನಿಕ ಅರ್ಥದಲ್ಲಿ ನಿರಕ್ಷರನು ನಿಜವಾದ ಅರ್ಥದಲ್ಲಿ ಸಾಂಪ್ರದಾಯಿಕನು ಆದ ಗೊಲ್ಲಗೌಡನ ಪಾತ್ರದ ಮೂಲಕ ಭೈರಪ್ಪನವರು ಹಲವು ಸ್ತರಗಳಲ್ಲಿ ಅದ್ಭುತವನ್ನು ಸೃಷ್ಟಿಸಿದ್ದಾರೆ. ಈ ಕಾದಂಬರಿಯಲ್ಲಿ ಸನಾತನ ಧರ್ಮಕ್ಕೂ ಗೋವಿಗೂ ಭಾರತಕ್ಕೂ ಇರುವ ಅವಿನಾಭಾವ ನಂಟನ್ನು ತಬ್ಬಲಿ ಕಾದಂಬರಿ ಸ್ಫುಟವಾಗಿ ತೋರಿಸುತ್ತದೆ.

ಭೈರಪ್ಪನವರ ಈ ಕಾದಂಬರಿಯೂ ವ್ಯಾಪಕವಾದ ಅರ್ಥದಲ್ಲಿ ಇತಿಹಾಸವನ್ನು ಬಿಡಿಸುವ ಕೌಶಲ ಎದ್ದು ತೋರಿಸುತ್ತದೆ. ಮುಖ್ಯವಾಗಿ ಬ್ರಿಟಿಷರ ಆಘಾತಕಾರಿಯಾದ ಹಸಿವು ಇಂಗದ ಆರ್ಥಿಕ ಉಪಾಯವನ್ನು ಅದರ ಸಾಮಾಜಿಕ ನೈತಿಕ ಹಾಗೂ ಸಾಂಸ್ಕೃತಿಕ ಪರಿಣಾಮಗಳನ್ನು ತಬ್ಬಲಿ ಪ್ರಕರವಾಗಿ ಚಿತ್ರಿಸಿದೆ. ತಬ್ಬಲಿಯಲ್ಲಿ ವೆಂಕಟರಮಣನು ಗೋ ಭಕ್ತಿಯ ಹಿಂದಿರುವ ಸಕಲ ಜೀವರಾಶಿಗಳ ಕಾರುಣ್ಯ, ಆರ್ದ್ರತೆ, ಸನಾತನ ಧರ್ಮದ ಮೌಲ್ಯಗಳ ಪರಿಕಲ್ಪನೆ ಆಚರಣೆಗಳು, ದೇವಾಲಯದ ಪೂಜೆಯ ಹಿಂದಿರುವ ತತ್ವ ಇತ್ಯಾದಿಗಳನ್ನು ವಿವರಿಸಿದೆ.

ತಬ್ಬಲಿಯೂ ನೀನಾದೆ ಮಗನೆ, ಕಾದಂಬರಿಯಲ್ಲಿ ಮೂಲಭೂತವಾದವಿದ್ದು ಸಂಪ್ರದಾಯ ಬದ್ಧತೆಯನ್ನು ಅದು ಪ್ರತಿಪಾದಿಸುತ್ತದೆ. ಪ್ರಗತಿಪರ ಧೋರಣೆಗೆ ಇದು ವಿರುದ್ಧ ಅಲ್ಲವೇ ಎಂದು ಲೇಖಕರನ್ನು ಕೇಳಿದಾಗ ಈ ಕೃತಿಯು ಜೀವ ಸಂಬಂಧಗಳ ಹುಡುಕಾಟ ಎಂದು ತಿಳಿಸಿದರು. ಮನುಷ್ಯರು ಇತರ ಸಹ ಜೀವಿಗಳೊಂದಿಗೆ ಹೇಗೆ ವರ್ತಿಸುತ್ತಾರೆ ಆ ವರ್ತನೆಯಲ್ಲಿ ಅವನ ಸಂಬಂಧವೇನು ಎಂಬ ಪ್ರಶ್ನೆಗಳು ಅಲ್ಲಿ ಹೇಳುತ್ತವೆ. ಹಸುವಿನ ಹಾಲನ್ನು ಮನುಷ್ಯ ಕುಡಿಯುವುದರಿಂದ ತಾಯಿ ಮಗುವಿನ ಸಂಬಂಧವೇ ಅಲ್ಲಿ ಉಂಟಾಗುವುದು ಇಲ್ಲಿಯ ಸಂಸ್ಕೃತಿಯ ಪರಿಕಲ್ಪನೆ ಮನುಷ್ಯ ದೇವ ಹೇಗೆ ರಕ್ಷಣಾ ಅರ್ಹವೋ

ಹಾಗೆಯೇ ಗೋ ದೇವು ರಕ್ಷಣಾ ಅರ್ಹ. ಹಾಗಾದರೆ ಪ್ರಗತಿ ಹೇಗೆ? ಪ್ರಗತಿ ಎಂದರೆ ಮನುಷ್ಯನ ಮಿತಿ ಇರದ ಆಕ್ರಮಣ ವೇನಲ್ಲವಲ್ಲ. ಆ ಮಟ್ಟಿಗೆ ಇತರ ದೇವರೂಪಗಳ ಮೇಲೆ ಅವನ ಹಕ್ಕೇನೂ ಇಲ್ಲ ಹಳ್ಳಿಯವರೆಲ್ಲರೂ ಈ ನಂಬಿಕೆಯಲ್ಲಿಯೇ ಬಾಳಿ ಬದುಕುತ್ತಾರೆ. ಕಾಳಿಂಗ ಗೋವುಗಳನ್ನು ಪೂಜಿಸುತ್ತಾನೆ ಮಾರುವುದಿಲ್ಲ. ಮನೆಗೆ ಎಷ್ಟು ಬೇಕೋ ಅಷ್ಟು ಹಾಲನ್ನು ಕರೆದುಕೊಂಡು ಉಳಿದುದನ್ನು ಕರುಗಳಿಗೆ ಬಿಡುತ್ತಿದ್ದನು.

ಆಧುನಿಕ ತಂತ್ರಜ್ಞಾನದ ಸಹಾಯದಿಂದ ಭಾರತ ದೇಶದ ಆಹಾರ ಸಮೃದ್ಧಿಯನ್ನು ಹೆಚ್ಚಿಸಿ ಆ ಮೂಲಕ ಇಲ್ಲಿಯವರನ್ನು ಉದ್ಧಾರ ಮಾಡಲು ಬಂದ ಹಿಲ್ಡಾ ಕೊನೆಗೆ ತನ್ನ ಕೃಷಿ ಭೂಮಿಯಲ್ಲಿ ಬೆಳೆದದ್ದು ಹೊಗೆಸೊಪ್ಪನ್ನು. ಅಂತೆಯೇ ಹಲವು ಸಂದರ್ಭಗಳಲ್ಲಿ ಅವಳ ಅನುಭವಕ್ಕೆ ಬರುವ ಅನ್ನ ಸಂತರ್ಪಣೆಯೂ ಸಿನಿಮಾದೃಶ್ಯದಲ್ಲಿಯೂ ಸಹ ಅವಳಲ್ಲಿ ಸಹಜವಾದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ. ಈ ದರಿದ್ರ ದೇಶದಲ್ಲಿ ಕಾಲಕಾಲಕ್ಕೆ ನಡೆಸುವ ಇಂತಹ ಅವಳ ಪತ್ರಗಳು ಏನನ್ನು ತೋರಿಸುತ್ತದೆ ಹಾಗೂ ಅದರ ಮೂಲ ಪ್ರೇರಣೆ ಏನು ಆದಿಕಾಲದಿಂದಲೂ ಭಾರತೀಯರು ಹಣಕ್ಕಿಂತ ಮಿಗಿಲಾಗಿ ದ್ರವ್ಯ ಸಮೃದ್ಧಿಗೆ ಹೆಚ್ಚಿನ ಮಹತ್ವ ನೀಡಿದ್ದು ಇಂದಿಗೂ ಕೂಡ ಮೆಚ್ಚುಗೆ ನೀಡುತ್ತಿರುವುದು ಸುವಿದಿತ.

ತಬ್ಬಲಿಯು ನೀನಾದೆ ಮಗನೆ ಕಾದಂಬರಿಯಲ್ಲಿ ಹಸುವಿನ ರೂಪಕವಾಗಿ ತಾಯವ್ವಳ ಪಾತ್ರವು ತನ್ನ ಎಲ್ಲಾ ಭಾವನಾತ್ಮಕ ತೇಜಸ್ಸು ಮತ್ತು ಕೌಸಲ್ಯ ಪೂರ್ಣ ಸಾಹಿತಿಕ ಕಲಾತ್ಮಕತೆಯಿಂದ ಅನಾವರಣಗೊಳಿಸುತ್ತದೆ. ಇಲ್ಲಿ ಗಮನಾರ್ಹವಾದ ವಿಷಯವೇನೆಂದರೆ ಹಸಿವಿನಂತೆಯೇ ಕಾಳಿಂಗನು ತಾನು ಪೂಜಿಸುವ ಹಸುಗಳ ಮೇಲೆ ತನ್ನ ಮನೆಯಿಂದ ಹಸುಗಳನ್ನು ಬೇರ್ಪಡಿಸಿದ ನಂತರ ತಾಯವ್ವನ ಜೀವನವು ನಿರಂತರ ಯುದ್ಧ ಮತ್ತು ಈ ಹಸುಗಳ ದುಸ್ಥಿತಿಯ ಬಗ್ಗೆ ಕೊನೆಯಿಲ್ಲದೆ ಚಿಂತನೆಯಾಗುತ್ತದೆ. ಮತ್ತು ಹಸುಗಳಂತೆ ಕಾಳಿಂಗ ಅವುಗಳ ಮೇಲೆ ಉಂಟುಮಾಡುವ ವೈಜ್ಞಾನಿಕ ಭಯಾನಕತೆಯನ್ನು ಮೌನವಾಗಿ ಸಹಿಸಿಕೊಳ್ಳುವುದನ್ನು ಬಿಟ್ಟು ಬೇರೆನನ್ನು ಮಾಡಲು ಸಾಧ್ಯವಿಲ್ಲ.

ಸ್ವಾಭಾವಿಕವಾಗಿಯೇ ಹಿಲ್ಡಾಳಿಂದ ಪುಣ್ಯಕೋಟಿಯ ಹತ್ಯೆ ಅವಳ ಜೀವನದಲ್ಲಿ ಒಂದು ನಿರ್ಣಾಯಕ ಹಂತವಾಗಿದೆ. ಅಮೆರಿಕಾದಿಂದ ಹಿಂದಿರುಗಿದ ಕಾಳಿಂಗ ತನ್ನದೇ ಆದ ಸಂಸ್ಕೃತಿಯಿಂದ ದೂರವಿರುವುದಲ್ಲದೆ ತನ್ನ ಸ್ವಂತ ತಾಯಿಯಿಂದ ದೂರವಾಗಿದ್ದಾನೆ. ಇದರಿಂದ ಮಹಿಳೆ ತನ್ನ ಗರ್ಭದಲ್ಲಿ ಸಂಪೂರ್ಣ ಸಂಸ್ಕೃತಿಯನ್ನು ಹೊಂದಿದ್ದಾಳೆ ಎಂಬ ವ್ಯಾಪಕವಾಗಿ ನಂಬಲಾದ ಮತ್ತು ಕಲಾತೀತ ಹೇಳಿಕೆಯನ್ನು ಪ್ರತಿಧ್ವನಿಸುತ್ತದೆ. ಹಾಗೆಯೇ ವೆಂಕಟರಮಣನನ್ನು ಗಮನಿಸಿದಂತೆಯೇ ಆತ ಕಾದಂಬರಿಯಲ್ಲಿ ಹಸುವಿನಂತೆಯೇ ಸಂಪೂರ್ಣ ಪಾಪರಹಿತ ಜೀವನವನ್ನು ನಡೆಸಿದ. ಯಾವಾಗಲೂ ಇತರರ ಸೇವೆ ಮಾಡುವ ಯಾವುದೇ ದುಷ್ಟ ಆಲೋಚನೆಯನ್ನು ಹೊಂದಿರದ ತನ್ನ ಸಂಸ್ಕೃತಿಯು

ತಮ್ಮಲ್ಲಿ ಬೇರೂರುವ ಧರ್ಮವನ್ನು ಪಾಲಿಸುವ ತಮ್ಮ ಗೋವುಗಳನ್ನು ತಮ್ಮದೇ ಆದ ರೀತಿಯಲ್ಲಿ ರಕ್ಷಿಸುವ ಮತ್ತು ಪೂಜಿಸುವ ಏಕೈಕ ಪಾತ್ರವೆಂದರೆ ತಾಯವ್ವ.

ತಾಯವ್ವನ ಮರಣದ ನಂತರ ಕಾಳಿಂಗ ತನ್ನ ಕೊಟ್ಟಿಗೆಯಲ್ಲಿದ್ದ ವಯಸ್ಸಾದ ಹಸುಗಳನ್ನು ಮುಂಬೈನ ಕಸಾಯಿಖಾನೆಯ ಏಜೆಂಟ್‌ಗೆ ಮಾರಿದ್ದಕ್ಕಾಗಿ ಹುಡುಕುವ ಮೂಲಕ ಕೊನೆಗೆ ಅವನು ಕಸಾಯಿಖಾನೆಯನ್ನು ತಲುಪುತ್ತಾನೆ. ಮತ್ತು ಅವನ ಹಸುಗಳನ್ನು ಹುಡುಕಲು ಸಾಧ್ಯವಾಗುವುದಿಲ್ಲ ಏಕೆಂದರೆ ಅವೆಲ್ಲವೂ ಅವನಿಗೆ ಒಂದೇ ರೀತಿ ಕಾಣುತ್ತವೆ ಮತ್ತು ಅಪಹರಣ ದೃಶ್ಯದಲ್ಲಿ ಕಾಳಿಂಗನು ತನ್ನ ಹಸುಗಳನ್ನು ನೋಡಿ ಅವುಗಳ ಮುಖ ಮತ್ತು ಕಣ್ಣುಗಳನ್ನು ತನ್ನ ತಾಯಿ ತಾಯವ್ವನ ಮುಖವನ್ನು ಓಲುತ್ತವೆ ಎಂದು ಭಾವಿಸುತ್ತಾನೆ ಮುಂಬೈನಲ್ಲಿರುವ ಆ ಬೃಹತ್ ಕಸಾಯಿಖಾನೆಯಲ್ಲಿ ಅವನು ನಿಜವಾಗಿಯೂ ತನ್ನ ತಾಯಿಯನ್ನು ಹುಡುಕುತ್ತಿದ್ದಾನೆ ಎಂಬ ವಿಭಿನ್ನ ರೀತಿಯ ಅರಿವಿನ ಆರಂಭ ಇದಾಗಿದೆ. ಡಾ. ಎಸ್.ಎಲ್.ಭೈರಪ್ಪ ಸ್ಪಷ್ಟಪಡಿಸುವಂತೆ ತನ್ನ ಮಗನಿಗೆ ತಾನು ಕಳೆದುಕೊಂಡಿದ್ದರ ಮೌಲ್ಯವನ್ನು ಅರಿತುಕೊಳ್ಳಲು ತಾಯವ್ವ ಸಾಯಬೇಕಾಯಿತು. ಬಹಶಃ ಶಾಶ್ವತವಾಗಿ ಇಲ್ಲಿ ತಬ್ಬಲಿ ಕೊನೆಗೊಳ್ಳುತ್ತದೆ.

ಹೀಗೆ ಮಾನವ ಮೌಲ್ಯಗಳು ನಮ್ಮ ನಡವಳಿಕೆಯನ್ನು ಮಾರ್ಗದರ್ಶಿಸುವ ಮೂಲಭೂತ ತತ್ವಗಳು ಮತ್ತು ನಂಬಿಕೆಗಳಾಗಿವೆ. ಮಾನವೀಯ ಮೌಲ್ಯಗಳು ವ್ಯಕ್ತಿಯೊಬ್ಬನ ನಡವಳಿಕೆ, ಯೋಚನೆ ಮತ್ತು ಸಮಾಜದೊಂದಿಗಿನ ಬಾಂಧವ್ಯವನ್ನು ನಿರ್ಧರಿಸುತ್ತವೆ. ಪ್ರೀತಿ, ಸಹಾನುಭೂತಿ, ಸತ್ಯನಿಷ್ಠೆ, ಮತ್ತು ಗೌರವದಂತಹ ಮೌಲ್ಯಗಳು ವ್ಯಕ್ತಿತ್ವದ ವಿಕಸನಕ್ಕೆ, ಉತ್ತಮ ಸಮಾಜ ನಿರ್ಮಾಣಕ್ಕೆ ಮತ್ತು ಮಾನವೀಯತೆಯ ಉಳಿವಿಗೆ ಅತ್ಯಂತ ಅವಶ್ಯಕವಾಗಿವೆ ಈ ತರಹದ ಮೌಲ್ಯಗಳು ನಮ್ಮ ಕನ್ನಡ ಸಾಹಿತ್ಯದಲ್ಲಿ ಹಲವಾರು ಕವಿವರ್ಯರಿಂದ ಹೆಣೆಯಲ್ಪಟ್ಟಿವೆ ಇದಕ್ಕೆ ತಕ್ಕಂತೆ ಎಸ್.ಎಲ್.ಭೈರಪ್ಪನವರ 'ತಬ್ಬಲಿಯು ನೀನಾದೆ ಮಗನೆ' ಎಂಬ ಕಾದಂಬರಿಯು ಮಾನವೀಯ ನೆಲೆಗಟ್ಟನ್ನು ಕಟ್ಟಿಕೊಡುತ್ತದೆ.

## ಪರಾಮರ್ಶನ ಗ್ರಂಥಗಳು


1. **ಎಸ್.ಎಲ್.ಭೈರಪ್ಪ : ತಬ್ಬಲಿಯು ನೀನಾದೆ ಮಗನೆ** ಸಾಹಿತ್ಯ ಭಂಡಾರ ಪ್ರಕಾಶನ,ಬೆಂಗಳೂರು– ಮೊದಲನೇ ಮುದ್ರಣ–1968,ಹತ್ತೊಂಬತ್ತನೇ ಮುದ್ರಣ – 2023
2. **ರಾಮಸ್ವಾಮಿ ಎನ್. – ಭೈರಪ್ಪನವರ ಕಾದಂಬರಿಗಳ ಒಂದು ಸಮಾಲೋಕನ** ಸಾಹಿತ್ಯ ಭಂಡಾರ ಜಂಗಮ ಮೇಸ್ತ್ರಿಗಲ್ಲಿ, ಬಳೇಪೇಟೆ, ಬೆಂಗಳೂರು.
3. **ಮಾಧವ ಕುಲಕರ್ಣಿ – ಭೈರಪ್ಪನವರ ಕಾದಂಬರಿ ಪ್ರಪಂಚ,**ತನುಮನ ಪ್ರಕಾಶನ,ಮೈಸೂರು, 2012